**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್. 112 /2022**

ಸಾಕ್ಷಿಯನ್ನು ದಿಃ **19.09.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಅರ್ಜಿಗಳ ಮೇಲಿನ ಆದೇಶದಂತೆ ಪಾಟೀ ಸವಾಲುಃ ಪ್ರತಿವಾದಿಯರ ಪರಃ ಶ್ರೀ. ಆರ್ ಕೆ ಶ್ರೀ.ಡಿ.ಜಿ ವಕೀಲರಿಂದ:**

ನಾನು 7ನೇ ತರಗತಿ ಓದಿದ್ದೇನೆ. ನಾನು ಟೈಲರ್ ಕೆಲಸ ಮಾಡುತ್ತೇನೆ. ಈಗ ನಾನು ಮೂರರಮ್ಮ ಕಾಲೋನಿ ಕಲ್ಕುಣಿಕೆಯಲ್ಲಿ ವಾಸವಿದ್ದೇನೆ. ಬಾಡಿಗೆ ಮನೆಯಲ್ಲಿ ಇದ್ದೇನೆ ಎಂದರೆ ಎಂದರೆ ಸರಿಯಲ್ಲ. ಸ್ವಂತ ಮನೆಯಲ್ಲಿದ್ದೇನೆ. ನನ್ನ ಗಂಡನ ಮನೆ ಎಮ್ಮೆಕೊಪ್ಪಲು ಎಂದರೆ ಸರಿ. ನನಗೆ ಇಬ್ಬರು ಮಕ್ಕಳಿದ್ದು, ಒಬ್ಬ ಪಧವಿ ಮತ್ತು ಒಬ್ಬ ದ್ವಿತೀಯ ಪಿಯುಸಿ ಓದುತಿದ್ದಾನೆ. ನಾನು ಈ ದಾವೆಯನ್ನು 1ನೇ ಪ್ರತಿವಾದಿಗೆ ಹಣ ಕೊಟ್ಟ ಬಗ್ಗೆ ಸಲ್ಲಿಸಿದ್ದೇನೆ. ಪ್ರೊನೋಟ್ ಬರೆಸಿಕೊಂಡಿದ್ದಿರಾ ಎಂದರೆ ಬರೆಸಿಕೊಂಡಿದ್ದೇನೆ. ಅದಕ್ಕೆ ಬಾಂಡ್ ಪೇಪರ್ ಎಲ್ಲಿಂದ ತಂದಿದ್ದಿರಿ ಎಂದರೆ 1ನೇ ಪ್ರತಿವಾದಿಯೇ ತಂದಿದ್ದಾರೆ. ದಿಃ 19.07.2019 ರಂದು ಪ್ರೊನೋಟ್ ಅನ್ನು ವಕೀಲರ ಕಚೇರಿಯಲ್ಲಿ ಬರೆಸಲಾಗಿದೆ. ಆ ಸಮಯದಲ್ಲಿ 1 ರಿಂದ 4ನೇ ಪ್ರತಿವಾದಿಯರು ಇದ್ದರು. ಬೇರೆ ಯಾರು ಇದ್ದರುಎಂದರೆ ಸಾಕ್ಷಿದಾರರಾದ ಶ್ರೀನಿವಾಸ ಮತ್ತು ಸತೀಶ ಇದ್ದರು. ಪ್ರತಿವಾದಿಯರು ಪ್ರೊನೋಟ್ ಗೆ ಯಾವ ರೀತಿ ಸಹಿ ಹಾಕಿದ್ದಾರೆ ಎಂದರೆ ಹೆಬ್ಬೆಟ್ಟು ಮತು ಸಹಿ ಎರಡೂ ಹಾಕಿದ್ದಾರೆ. ರೂ.50 ಸಾವಿರಕ್ಕೂ ಹೆಚ್ಚಿನ ಹಣಕಾಸಿನ ವ್ಯವಹಾರವನ್ನು ಚೆಕ್ ಮೂಲಕ ಮಾಡಬೇಕೆಂಬ ಕಾನೂನಿನ ನಿಯಮ ಇದೆ ಎಂದರೆ ಗೊತ್ತಿಲ್ಲ.

ನಾನು ನನ್ನ ಗಂಡನ ವಿರುದ್ಧ DV Act ಅಡಿಯಲ್ಲಿ ಇದೇ ನ್ಯಾಯಾಲಯದಲ್ಲಿ ಒಂದು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಈಗ ತೋರಿಸುತ್ತಿರುವ ದಾಖಲೆ ನಾನು ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲು ಎಂದರೆ ಸರಿ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ನಾನು ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಆಗ ನಾನು ಬಾಡಿಗೆ ಮನೆಯಲ್ಲಿ ವಾಸವಿದ್ದೆ. ಸದರಿ ಅರ್ಜಿಯಲ್ಲಿ ನಾನು ಟೈಲರಿಂಗ್ ಹೊರತುಪಡಿಸಿ ಬೇರೆ ಆದಾಯ ಇಲ್ಲ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ನಾನು ನನ್ನ ಗಂಡನಿಂದ ತಿಂಗಳಿಗೆ ರೂ. 40 ಸಾವಿರ ಜೀವನಾಂಶ ಕೇಳಿದ್ದೇನೆ ಎಂದರೆ ಸರಿ. ನಾನು ನನ್ನ ಗಂಡನಿಂದ

ಜೀವನಾಂಶ ಕೇಳಿರುವ ಕಾರಣ, ನಾನು ಆರ್ಥಿಕವಾಗಿ ಸದೃಢಳಾಗಿರಲಿಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿಯ ಗಂಡ ಚಂದ್ರೇಗೌಡ ಮತ್ತು ಅವರ ಮಗ ಕಾಂತರಾಜು ನನ್ನ ಆತ್ಮೀಯ ಸ್ನೇಹಿತರು ಎಂದರೆ ಸರಿಯಲ್ಲ. ಕಾಂತರಾಜುರವರಿಂದ ನಾನು ಹಣ ಪಡೆದುಕೊಂಡಿದ್ದು, ಅದನ್ನು ಅವರು ವಾಪಸ್ಸು ಕೇಳಿದಾಗ ದಾಖಲೆ ಸೃಷ್ಟಿ ಮಾಡಿಕೊಂಡು ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಬಳಿ ರೂ. 5 ಲಕ್ಷ ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ. ನಾನು ಆರ್ಥಿವಾಗಿ ದುರ್ಬಲಳಾಗಿದ್ದೇನೆ ಎಂದರೆ ಸರಿಯಲ್ಲ. ಕಾಂತರಾಜುರವರು ನನ್ನ ಬಳಿ ಹಣ ವಾಪಸ್ಸು ಕೇಳಿದಾಗ ನಾನು ಮತ್ತು ಸಾಕ್ಷಿದಾರರು ಸೇರಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.